ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಮೇ 4, 2015

# ಸಂಜೆವಾಣಿ ಸಂಸ್ಥಾಪಕ ಬಿ. ಎಸ್. ಮಣಿ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ಮೇ 4:

ಸಂಜೆವಾಣಿ ಕನ್ನಡ ಸಂಜೆ ದೈನಿಕದ ಸಂಸ್ಥಾಪಕ ಶ್ರೀ ಬಿ. ಎಸ್. ಮಣಿ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕನ್ನಡ ಪತ್ರಿಕೋದ್ಯಮದಲ್ಲಿ ಯಶಸ್ಸು ಕಂಡ ಸಂಜೆ ದಿನಪತ್ರಿಕೆಗಳು ಕೇವಲ ಬೆರಳೆಕೆಯಷ್ಟು ಮಾತ್ರ. ಅದರಲ್ಲಿ ಸಂಜೆವಾಣಿ ಅಗ್ರಸ್ಥಾನ ಪಡೆದಿದೆ. ಸಂಜೆವಾಣಿಗಿಂತಲೂ ಮುನ್ನ ಜನ್ಮತಾಳಿದ್ದ ಹಲವು ಸಂಜೆ ದೈನಿಕಗಳು ಮಾಹಿತಿ ಮಾರುಕಟ್ಟೆಯಲ್ಲಿ ಗೆಲುವು ಸಾಧಿಸಲಾಗಲಿಲ್ಲ ಎಂಬುದು ಕಟು ಸತ್ಯ. ಆದರೆ, 33 ವರ್ಷಗಳ ಹಿಂದೆಯೇ, ಓದುಗರಿಗೆ ಅಂದಿನ ಸುದ್ದಿಯನ್ನು ಅಂದೇ ತಲುಪಿಸುವ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾದದ್ದು ಸಂಜೆವಾಣಿಯ ಸಾಹಸ. ಇದಕ್ಕೆ ಪ್ರಮುಖ ಹಾಗೂ ಮೂಲ ಕಾರಣ ಸಂಜೆವಾಣಿಯ ಸಂಸ್ಥಾಪಕ ಶ್ರೀ ಬಿ. ಎಸ್. ಮಣಿ ಅವರ ದೂರದೃಷ್ಟಿ ಮತ್ತು ಶ್ರಮ.

ಮಾತೃ ಭಾಷೆ ತಮಿಳಾದರೂ, ಕನ್ನಡ ಪ್ರೇಮ ಬೆಳೆಸಿಕೊಂಡ ಶ್ರೀ ಬಿ. ಎಸ್. ಮಣಿ ಅವರು ಸಂಜೆವಾಣಿ ಪತ್ರಿಕೆಯ ಮೂಲಕ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಅನ್ವೇಷಣೆ ಹಾಗೂ ನೂತನ ಆವಿಷ್ಕಾರಗಳಿಗೆ ಅನುವುಮಾಡಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಒಂದು ಪ್ರದೇಶಕ್ಕೇ ಸೀಮಿತಗೊಳ್ಳುವ ಸಂಜೆ ಪತ್ರಿಕೆಯನ್ನು ಹತ್ತು ಆವೃತ್ತಿಗಳಿಗೆ ವಿಸ್ತರಿಸಿದ ಕೀರ್ತಿ ಶ್ರೀ ಬಿ. ಎಸ್. ಮಣಿ ಅವರದ್ದಾಗಿದೆ. ಕನ್ನಡ ಪತ್ರಿಕೋದ್ಯಮದಲ್ಲಿ ಅಂತರ್ಜಾಲ ಪ್ರವೇಶಿಸಿದ ಪ್ರಪ್ರಥಮ ಪತ್ರಿಕೆ ಎಂಬ ಗೌರವವೂ ಸಂಜೆವಾಣಿಗೆ ಸಲ್ಲುತ್ತದೆ. ಸಂಜೆವಾಣಿಯ ಈ ಸಾಹಸಕ್ಕೆ ಶ್ರೀ ಬಿ. ಎಸ್. ಮಣಿ ಅವರೇ ಪ್ರೇರಣೆ ಮತ್ತು ಸ್ಫೂರ್ತಿ ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಶ್ರೀ ಬಿ. ಎಸ್. ಮಣಿ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯಿಂದ ಉಂಟಾದ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

*********

ಡಿ ಪಿ ಎಂ